# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ವಿರಾಜಪೇಟೆ

**ಸಿ.ಸಿ. ಸಂಖ್ಯೆ ಃ 77/2024**

ಚಾಸಾ ಃ 1

ಪ್ರಾಸಾ ಃ 1

| | |
|---|---|
| **ಹೆಸರು** | ಃ ಸಂತೋಷ್ ಚೌಹಣ್ |
| **ತಂದೆಯ ಹೆಸರು** | ಃ ಕಾಸು |
| **ವಯಸ್ಸು** | ಃ 32 ವರ್ಷ |
| **ಉದ್ಯೋಗ** | ಃ ಪೊಲೀಸ್ ಪೇದೆ, ವಿರಾಜಪೇಟೆ ಗ್ರಾಮಾಂತರ ಪೊಲೀಸ್ ಠಾಣೆ |
| **ವಾಸಸ್ಥಳ** | ಃ ವಿರಾಜಪೇಟೆ |

**ದಿನಾಂಕ ಃ 21-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಮಾನ್ಯ ಸ. ಸ. ಅ. ರವರಿಂದ ಃ -**

1. ನಾನು ಜುಲೈ 2016 ರಿಂದ ಜುಲೈ 2024 ರವರೆಗೆ ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 18-11-2023 ರಂದು ನನಗೆ ಠಾಣೆಯಲ್ಲಿ ಸಿದ್ದಾಪುರ ಟ್ರಾಫಿಕ್ ನಿಯಂತ್ರಣ ಕರ್ತವ್ಯಕ್ಕೆ ನೇಮಿಸಿದ್ದು, ಅದರಂತೆ ಸದರಿ ದಿನದಂದು ಕರ್ತವ್ಯ ನಿರ್ವಹಿಸಿಕೊಂಡಿರುವಾಗ ಸಮಯ ಸಂಜೆ 5.30 ಗಂಟೆಗೆ ಸಿದ್ದಾಪುರದ ಬಸ್ ನಿಲ್ದಾಣದ ಬಳಿ ಸಾರ್ವಜನಿಕ ರಸ್ತೆಯಲ್ಲಿ ಕೆಎ 12 ಕೆ 2899 ನೊಂದಣಿ ಸಂಖ್ಯೆಯ ರಾಯಲ್ ಎನ್ ಫೀಲ್ಡ್ ಮೋಟಾರ್ ಬೈಕ್ ನ್ನು ತೊಂದರೆಯಾಗುವಂತೆ ಸಾರ್ವಜನಿಕರ ರಸ್ತೆಯಲ್ಲಿ ಅಡ್ಡದಿಡ್ಡಿಯಾಗಿ ಬೈಕ್ ನಿಲ್ಲಿಸಿದ್ದು, ನಾನು ಬೈಕ್ ಬಳಿ ಹೋಗಿ ಈ ಬೈಕ್ ಯಾರದ್ದು, ಸಾರ್ವಜನಿಕರಿಗೆ ತೊಂದರೆಯಾಗುತ್ತದೆ ಬೈಕ್ ತೆಗೆಯಿರಿ ಎಂದು ಹೇಳಿದಾಗ, ಅಲ್ಲೇ ಪಕ್ಕದಲ್ಲೆ ನಿಂತಿದ್ದ ಆರೋಪಿ ಬೈಕ್ ಬಳಿ ಬಂದು, ಸಮವಸ್ತ್ರದಲ್ಲಿದ್ದ ನನ್ನನ್ನು ಕುರಿತು ನಾನು ಬೈಕ್ ನ್ನು ತೆಗೆಯುವುದಿಲ್ಲ ಏನು ಮಾಡುತ್ತೀಯ ಸೂಳೇ ಮಗನೇ ಎಂದು ಕೊಡವ ಭಾಷೆಯಲ್ಲಿ ಬೈದು, ನನ್ನ ಬೈಕ್ ತೆಗೆಯಿರಿ ಎಂದು ಹೇಳಲು ನೀನು ಯಾರೆಂದು ಹೇಳಿ, ತನ್ನ ಕೈಯಲ್ಲಿದ್ದ ಹೆಲ್ಮೆಟ್ ನಿಂದ ನನ್ನ ತಲೆ ಹಾಗೂ ಎಡಕೈಗೆ ಹಲ್ಲೆ ಪಡಿಸಿರುತ್ತಾರೆ.

3. ನಂತರ ಬಸ್ ನಿಲ್ದಾಣದಲ್ಲಿದ್ದ ನಮ್ಮ ಸಿಬ್ಬಂದಿಗಳು ಹಾಗೂ ಚಾಸಾ2 ಹಾಗೂ 3 ರವರುಗಳು ಆರೋಪಿಯನ್ನು ಸಮಾಧಾನಪಡಿಸಿ, ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಂತರ ಆರೋಪಿಯ ಬಗ್ಗೆ ಸಾರ್ವಜನಿಕರಿ ಬಳಿ ವಿಚಾರಿಸಲಾಗಿ ಆರೋಪಿಯ ಮಾಹಿತಿಯನ್ನು ನೀಡಿರುತ್ತಾರೆ. ನಂತರ ಸಿದ್ದಾಪುರದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಅಲ್ಲಿ ವೈದ್ಯಾಧಿಕಾರಿಗಳು ಇರುವುದಿಲ್ಲ, ಆದರೆ ನೋವು ನಿವಾರಕ ಔಷಧಿಯನ್ನು ಪಡೆದುಕೊಂಡು ಆಸ್ಪತ್ರೆಯಿಂದ ಸಿದ್ದಾಪುರ ಪೋಲಿಸ್ ಠಾಣೆಗೆ ಹೋಗಿ ಪುಕಾರನ್ನು ನೀಡಿರುತ್ತೇನೆ. ನಂತರ ಚಾಸಾ17 ರವರು ಚಾಸಾ13 ರವರೊಂದಿಗೆ ನನ್ನನ್ನು ಚಿಕಿತ್ಸೆಯ ಬಗ್ಗೆ ವಿರಾಜಪೇಟೆ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದು, ನಾನು ಸದರಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ.

4. ನಂತರ ದಿನಾಂಕ 19-11-2023 ರಂದು ಕೃತ್ಯ ಸ್ಥಳವನ್ನು ನಾನು ತೋರಿಸಿಕೊಟ್ಟ ಮೇರೆಗೆ ಚಾಸಾ-4 ಹಾಗೂ 5 ರವರ ಸಮಕ್ಷಮ ಕೃತ್ಯ ಸ್ಥಳ ಮಹಜರ ಕ್ರಮ ಜರುಗಿಸಿರುತ್ತಾರೆ. ಸದರಿ ಮಹಜರಿಗೆ ನಾನು ಸಹಿ ಮಾಡಿರುತ್ತೇನೆ. ಆ ಸಮಯದಲ್ಲಿ ಫೋಟೋ ಸಹ ತೆಗೆದಿರುತ್ತಾರೆ. ನಂತರ ದಿನಂಾಕ 21-11-2023 ರಂದು ನಾನು ತನಿಖಾಧಿಕಾರಿವಯವರ ಮುಂದೆ ಮರು ಹೇಳಿಕೆ ನೀಡಿರುತ್ತೇನೆ.

5. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದನ್ನು ನಿಪಿ1 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ1ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಮಹಜರನ್ನು ನೋಡಿ ಗುರುತಿಸಿದ್ದನ್ನು ನಿಪಿ2 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ2ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಮಹಜರಿನ ಸಮಯದಲ್ಲಿ ಎರಡು ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದನ್ನು ನಿಪಿ3 ಹಾಗೂ 4 ಎಂದು ಗುರುತಿಸಲಾಯಿತು. ಭಾವಚಿತ್ರಗಳಿಗೆ ಸಿಡಿಯನ್ನು ನಿಪಿ5 ಎಂದು ಗುರುತಿಸಲಾಯಿತು. ಆರೋಪಿಯು ಕೃತ್ಯಕ್ಕೆ ಬಳಸಿದ ಹೆಲ್ಮೆಟ್ ನ್ನು ಗುರುತಿಸಿದ್ದನ್ನು ಮು ಮಾ 1 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

ಮುಖ್ಯ ವಿಚಾರಣೆ ಮುಕ್ತಾಯ.

**ಪಾಟಿ ಸವಾಲು ಃ ಆರೋಪಿ ಪರ ಶ್ರೀ. ಎಂ ಎಸ್ ವಿ ವಕೀಲರಿಂದ ಃ**

1. ಆರೋಪಿಯ ಪೂರ್ವ ಪರಿಚಯ ಇರುವುದಿಲ್ಲ. ಸಿದ್ದಾಪುರದ ಬಸ್ ನಿಲ್ದಾಣ ತ್ರಿಕೋನ ಆಕಾರದಲ್ಲಿದೆ ಎಂದರೆ ಸರಿ. ಟ್ರಾಫಿಕ್ ನಿಯಂತ್ರಣ ಮಾಡಲು ನನ್ನೊಬ್ಬನಿಗೆ ಆ ದಿನ ಕರ್ತವ್ಯಕ್ಕೆ ನೇಮಿಸಿರುತ್ತಾರೆ. ಬೈಕ್ ನಿಲ್ಲಿಸಿದ್ದ ಜಾಗ ಸಾರ್ವಜನಿಕ ರಸ್ತೆಯಾಗಿತ್ತು. ಸದರಿ ರಸ್ತೆಯು ಮುಂದೆ ಕರಡಿಗೋಡು ಊರಿಗೆ ಹೋಗುವ ರಸ್ತೆ ಆಗಿರುತ್ತದೆ. ಈ ವಿಚಾರವನ್ನು ನನ್ನ ದೂರಿನಲ್ಲಿ ತಿಳಿಸಿರುತ್ತೇನೆ. ನನಗೆ ಕೊಡವ ಭಾಷೆ ಮಾತನಾಡಲು ಬರುವುದಿಲ್ಲ, ಆದರೆ ಅರ್ಥವಾಗುತ್ತದೆ. ಆರೋಪಿಯು ನನಗೆ ಕೊಡವ ಭಾಷೆಯಲ್ಲಿ ಸೂಳೇ ಮೊವ ಎಂದು ಬೈದಿರುತ್ತಾರೆ. ಆರೋಪಿಯು ನನಗೆ ಬೈದು ಹಲ್ಲೆ ಮಾಡುವ ಸಂದರ್ಭದಲ್ಲಿ, ಯಾರೋ ಸಾರ್ವಜನಿಕರು ಅದನ್ನು ಚಿತ್ರೀಕರಣ ಮಾಡಿರುತ್ತಾರೆ. ಈ ಕುರಿತು ನಾನು ದೂರಿನಲ್ಲಿ ನಮೂದಿಸಿರುವುದಿಲ್ಲ. ಮುಂದುವರೆದ ಹೇಳಿಕೆಯಲ್ಲಿಯೂ ಸಹ ಚಿತ್ರೀಕರಣ ಮಾಡಿರುವ ವಿಚಾರ ನಾನು ತಿಳಿಸಿರುವುದಿಲ್ಲ. ಆರೋಪಿ ನನಗೆ ಬೈದಿಲ್ಲ ಹಾಗೂ ಹಲ್ಲೆ ಮಾಡಿರುವುದಿಲ್ಲ ಆದ್ದರಿಂದ ತನಿಖಾಧಿಕಾರಿಗಳು ಚಿತ್ರೀಕರಣ ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

2. ಆರೋಪಿಯು ನನಗೆ ಹಲ್ಲೆ ಮಾಡಿಲ್ಲ ಹಾಗುಾ ಬೈದಿಲ್ಲ ಎಂದರೆ ಸರಿಯಲ್ಲ. ನನಗೆ ಚಾಸಾ2 ಹಾಗುಾ 3 ರವರು ಬಂದು ಸಮಾಧಾನ ಮಾಡಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಸಿದ್ದಾಪುರ ಸರ್ಕಾರಿ ಆಸ್ಪತ್ರೆಯಲ್ಲಿರುವ ನರ್ಸ್ ನನಗೆ ಮಾತ್ರೆಯನ್ನು ನೀಡಿರುತ್ತಾರೆ. ನನಗೆ ಆರೋಪಿ ಹಲ್ಲೆ ಮಾಡಿರುವ ವಿಚಾರ ನಾನು ನರ್ಸ್ ರವರಿಗೆ ತಿಳಿಸಿರುತ್ತೇನೆ. ನಾನು ಆಸ್ಪತ್ರೆಗೆ ಹೋಗಿರುವುದಿಲ್ಲ ಅಲ್ಲಿ ಯಾವುದೇ ಮಾತ್ರ ತೆಗೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ವಿರುದ್ಧ ಒಂದು ಸುಳ್ಳು ಪ್ರಕರಣ ದಾಖಲಿಸುವ ಉದ್ದೇಶದಿಂದ ವಿರಾಜಪೇಟೆಯ ಸರ್ಕಾರಿ ಆಸ್ಪತ್ರೆಗೆ ಬಂದು ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ2 ಮಹಜರಿಗೆ ನಾನು ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಮು ಮಾ 1 ನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿ. ನಾನು ಮುಂದುವರೆದ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಬಲವನ್ನು ತರಲು ಮುಂದುವರೆದ ಹೇಳಿಕೆಯನ್ನು ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ಮು ಮಾ 1 ರಿಂದ ನನಗೆ ಯಾವುದೇ ಹಲ್ಲೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನನಗೆ ಕರ್ತವ್ಯಕ್ಕೆ ಅಡ್ಡಿಪಡಿಸಿ, ಬೈದು, ಹೆಲ್ಮೆಟ್ ನಿಂದ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 3 ಹಾಗುಾ 4 ಈ ಪ್ರಕರಣಕ್ಕ ಸೃಷ್ಟಿ ಮಾಡಿದ್ದೇವೆ ಎಂದರೆ

ಸರಿಯಲ್ಲ. ಆರೋಪಿಯ ವಿರುದ್ದ ಸುಳ್ಳು ದೂರಿನ್ನು ನೀಡಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟಿ ಸವಾಲು ಮುಕ್ತಾಯ.

ಮರು ವಿಚಾರಣೆಃ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)
ಓ ಹೇ ಕೇ ಸ ಇದೆ,

ಸಹಿ/-
(ಪ್ರದೀಪ ಪೋತದಾರ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ವಿರಾಜಪೇಟೆ